ಸಮಸಮಾನರಾಗಿ ಸುಖದಿಂದ ಬಾಳುತ್ತಾರೆ ಎಂಬುದು ಕಾಮ್ರೇಡ್ ಆಲಿ ರೈಟರು ನಂಬಿಕೊಂಡ ಸಿದ್ಧಾಂತವಾಗಿತ್ತು. ಅವರ ಮಾಲೀಕರಾದ ಕಾಮ್ರೇಡ್ ಚಂಗಪ್ಪನವರೂ ಇದನ್ನು ನಂಬಿಕೊಂಡಿದ್ದರು. ಕೊಡಗು-ಕೇರಳದ ನಡುವಿನ ದುರ್ಗಮ ಪರ್ವತ ಸಾಲಿನ ಆ ಒಂದು ಚೂಪು ಬೆಟ್ಟದ ಇಳಿಜಾರಿನಲ್ಲಿರುವ ಈ ಕಾಫಿ ತೋಟವೂ, ಮೈಸೂರಿನ ಸಂದೊಂದರಲ್ಲಿದ್ದ ಆ ಬೆಂಕಿ ಪೆಟ್ಟಿಗೆ ಕಾರ್ಖಾನೆಯೂ ಎಲ್ಲವೂ ಈ ಮಹಾ ಪ್ರಸ್ಥಾನದ ಒಂದು ಭಾಗವಾಗಿದೆ ಎಂದು ಅವರು ತಮ್ಮ ರೈಟರಾದ ಆಲಿಯವರನ್ನೂ ನಂಬಿಸಿದ್ದರು.

ಆ ಮಹಾಪ್ರಸ್ಥಾನದ ನಂತರ ಸಾಹುಕಾರರು, ರೈಟರು, ಕೂಲಿಯಾಳುಗಳು ಎಂಬ ಆರ್ಥಿಕ ಅಸಮಾನತೆಗಳಿರುವುದಿಲ್ಲ. ಕಾರ್ಮಿಕ ರಾಜ್ಯದಲ್ಲಿ ಎಲ್ಲರೂ ಸಮಾನರಾಗಿರುವರು ಎಂದು ರೇಲು ಹತ್ತಿಸಿದ್ದರು.

ಆದರೆ, ಈ ಮಹಾಪ್ರಸ್ಥಾನದ ರೇಲು ಎಲ್ಲಿಯೋ ಹಳಿ ತಪ್ಪಿದೆ ಎಂದು ಆಲಿ ರೈಟರಿಗೆ ಅನಿಸಲು ಶುರುವಾಗಿ ರಾತ್ರಿ ನಿದ್ದೆಯಲ್ಲಿ ನಡೆಯುವುದು, ಕನಸಿನಲ್ಲಿ ಮಾತನಾಡುವುದು, ನಡುರಾತ್ರಿಯಲ್ಲಿ ಎದ್ದು ಹೊರಗೆ ಬಂದು ಬಿಡಾರದ ಸಿಮೆಂಟಿನ ತಿಣ್ಣೆಯ ಮೇಲೆ ಕುಳಿತು ಆಕಾಶ ನೋಡುವುದು ಮಾಡುತ್ತಿದ್ದರು. ಅದಕ್ಕೆ ಸರಿಯಾಗಿ ಮಗಳು ಜುಬೇದಾಳೂ ನೂರು ಮೀಟರ್ ಓಡಬೇಕಿದ್ದವಳು ಸಾವಿರಾರು ಕಿಲೋಮೀಟರ್ ದೂರಕ್ಕೆ ಓಡಿ ಯಾವನೋ ಒಬ್ಬನ ಜೊತೆ ಪರಾರಿಯಾಗಿದ್ದಳು.

ಈ ನಡುವೆ ಸಟ್ಟುಗ ಮರವನ್ನು ಕದ್ದು ಸಾಗಿಸುವಾಗ ಕಾಫಿ ತೋಟದ ಮಾಲೀಕರಾದ ಚಂಗಪ್ಪನವರನ್ನು ಅರಣ್ಯ ಇಲಾಖೆಯವರು ಬಂಧಿಸಿ ಮೈಸೂರಿನ ಜೈಲಿಗೆ ಹಾಕಿದ್ದರು. ಆಲಿ ರೈಟರಿಗೂ ಎರಡು ತಿಂಗಳಿನಿಂದ ಸಂಬಳವಾಗಿರಲಿಲ್ಲ. ಅಸ್ಸಾಮಿನಿಂದ ಕಾಫಿ ತೋಟದ ಕೆಲಸಕ್ಕೆ ಬಂದಿದ್ದ ವಲಸೆ ಕಾರ್ಮಿಕರು ಸಂಬಳ ಸಿಗದೆ ಆಲಿ ರೈಟರನ್ನು ಥಳಿಸಿದ್ದರು. ಜುಬೇದಾ ಅವರಲ್ಲಿಯೇ ಒಬ್ಬನೊಡನೆ ಪರಾರಿಯಾಗಿರುವುದು ಎಂದು ಊರ ಹುಡುಗರಿಗೆ ಉರಿ ಹತ್ತಿ ಅವರು ವೀರಾಜಪೇಟೆ ಮಾರ್ಕೆಟ್ಟಿನಲ್ಲಿ ಕಂಡ ಕಂಡ ಅಸ್ಸಾಮಿಗರಿಗೆ ಥಳಿಸಿದ್ದರು. ಆ ಸಿಟ್ಟೂ, ಸಂಬಳ ಸಿಗದ ಸಿಟ್ಟೂ ಸೇರಿಕೊಂಡು ಅಸ್ಸಾಮಿ ಹುಡುಗರು ಕಾಮ್ರೇಡ್ ಆಲಿ ರೈಟರಿಗೆ ಜೋರಾಗಿಯೇ ಥಳಿಸಿದ್ದರು.

'ಕ್ರಾಂತಿಯ ದಾರಿಯಲ್ಲಿ ಇದೆಲ್ಲಾ ಇರುವುದೇ... ದಾರಿ ದುರ್ಗಮವಾಗಿದ್ದರೂ ಭವಿಷ್ಯ ಉಜ್ವಲವಾಗಿದೆ ಎಂದು ಚೇರ್ಮನ್ ಮಾವೋ ಹೇಳಿಲ್ಲವೇ...' ಎಂದು ಕಾಮ್ರೇಡ್ ಆಲಿ ರೈಟರು ಹೆಂಡತಿಯ ಬಳಿ ಸಬೂಬು ಹೇಳಲು ನೋಡಿದ್ದರು.

'ನಿಮ್ಮ ಕ್ರಾಂತಿಯ ಬಾಯಿಗೆ ಮಣ್ಣುಬಿತ್ತು. ಮೊದಲು ಓಡಿ ಹೋಗಿರುವ ನಿಮ್ಮ ಮಗಳನ್ನು ಹುಡುಕಿಕೊಂಡು ಬನ್ನಿ. ನನಗೆ ಇಲ್ಲಿ ಕೇಳಿದವರಿಗೆ ಉತ್ತರ ಹೇಳಿ ತಲೆಗೆ ಹುಚ್ಚು ಹಿಡಿದು ಬೆಂಕಿ ಹತ್ತಿದೆ' ಎಂದು ಅಮ್ಮಾಯಿ ಅವರನ್ನು ತರಾಟೆಗೆ ತೆಗೆದುಕೊಂಡು ಏನಾದರೂ ಪರಿಹಾರ ದೊರೆಯಬಹುದು ಎಂದು ನನ್ನ ಬಳಿಗೆ ಶ್ರೀರಾಮ ಬಸ್ಸು ಹತ್ತಿಸಿ ಕಳಿಸಿದ್ದರು.

* * *

ವಾರದ ಸಂಬಳ ಬಟವಾಡೆಗೆ ಐವತ್ತು ಸಾವಿರವೂ ಸಿಗಲಾರದು, ಐದು ನೂರೂ ಸಿಗಲಾರದು ಎಂದು ಅರಿವಾದ ಕಾಮ್ರೇಡ್ ಆಲಿ ರೈಟರು ಕೊಂಚ ಉದ್ವಿಗ್ನರಾಗಿ ಹೊರಟು ನಿಂತಿದ್ದರು. ಭಾಗಮಂಡಲಕ್ಕೆ ವಾಪಾಸು ತೆರಳುವ ಶ್ರೀರಾಮ ಬಸ್ಸು ಅವರನ್ನು ಹತ್ತಿಸಿಕೊಳ್ಳಲು ಸಿದ್ಧವಾಗಿ ಮಡಿಕೇರಿಯ ಟೋಲುಗೇಟಿನ ಬಳಿಯ ಪೆಟ್ರೋಲು ಬಂಕಿನಲ್ಲಿ ಹೊಗೆ ಉಗುಳುತ್ತಾ ನಿಂತಿತ್ತು.

ಪ್ರತಿಬಾರಿಯೂ ಶುಕ್ರವಾರ ಬಂದಾಗಲೆಲ್ಲ ಅವರನ್ನು ಬಸ್ಸು ಹತ್ತಿಸಲು ಇದೇ ಈ ಪೆಟ್ರೋಲು ಬಂಕಿಗೆ ಬರುವುದು. ಪ್ರತಿಬಾರಿಯೂ ಅವರಿಗಾಗಿ ಕಾದಿರುವಂತೆ ನಿಂತಿರುವ ಈ ಶ್ರೀರಾಮ ಬಸ್ಸು ಇವರು ಬಂದೊಡನೆ ಡೀಸೆಲು ತುಂಬಿಸಿ ಮುಗಿಸಿ, ಸಂಪಾಜೆ ಇಳಿ ರಸ್ತೆಯೊಳಕ್ಕೆ ಇಳಿದು ದಪ್ಪಗೆ ಹೊಗೆ ಉಗುಳುತ್ತಾ ಭಾಗಮಂಡಲದ ರಸ್ತೆಯೊಳಕ್ಕೆ ಮಾಯವಾಗುವುದು.

ಕೋಪಟ್ಟಿ ಎಂಬಲ್ಲಿ ಬಸ್ಸು ಇಳಿದ ರೈಟರು ಉತ್ತರಾಭಿಮುಖವಾಗಿ ತೀಪಟ್ಟಿ ಮಲೆಯ ಏರುದಾರಿ ಹತ್ತುತ್ತಾ ಕತ್ತಲಾಗುವ ಹೊತ್ತಿಗೆ ಸನ್ ರೈಸ್ ಕಾಫೀ ತೋಟ ತಲುಪುವರು. ಹೋಗಲು ಮನಸಿಲ್ಲದವರಂತೆ ಆಲಿ ರೈಟರು ಕಾರೊಳಗೇ ಕುಳಿತು ನನ್ನ ಮುಖ ನೋಡುತ್ತಿದ್ದರು. ಹೋಗಿ ಅನ್ನುವಂತೆ ಕಣ್ಣಲ್ಲೇ ನಾನು ಅವರನ್ನು ಹೊರನೂಕುತ್ತಿದ್ದೆ.

'ಹೋಗಿ ಅಲ್ಲಿ ಎಂತ ಮಾಡುವುದು ರಶೀದೇ...'